# ಧ್ವನಿ ಗ್ರಹಿಸುವ ಕೀಲಿಮಣೆ




ಮೊಬೈಲ್‌ನಲ್ಲಿ ಸಂದೇಶ ಟೈಪ್ ಮಾಡಲು ಬೇಸರವಾಗಿದ್ದರೆ, ಸುಮ್ಮನೆ ಮಾತನಾಡುತ್ತಾ ಹೋಗಿ, ಕೀಲಿಮಣೆ ಇದನ್ನು ಗ್ರಹಿಸಿ ಸಂದೇಶವನ್ನು ನಿಮಗೆ ಸಿದ್ಧ ಮಾಡಿಕೊಡುತ್ತದೆ. ಈ ಆ್ಯಂಡ್ರಾಯ್ಡ್ ಆ್ಯಪ್ ಅನ್ನು ಚೀನಾದ ಗೂಗ್ಲ್ ಎಂದೇ ಖ್ಯಾತಿ ಪಡೆದ ಬೈಡು ಕಂಪೆನಿ ಸಿದ್ಧಪಡಿಸಿದ್ದು, ಇಂಗ್ಲಿಷ್‌ನಲ್ಲಿ ಟೈಪ್ ಮಾಡುವುದಕ್ಕಿಂತ ಮೂರು ಪಟ್ಟು ವೇಗವಾಗಿ ಈ ಧ್ವನಿ ಗ್ರಹಿಕೆ ತಂತ್ರಜ್ಞಾನ ಕೆಲಸ ಮಾಡುತ್ತದೆ. ಈ ತಂತ್ರಜ್ಞಾನವೇನೂ ಹೊಸದಲ್ಲ. ಗೂಗ್ಲ್ ಕೀಬೋರ್ಡ್ ಈಗಾಗಲೇ ಧ್ವನಿ ಗ್ರಹಿಸುವ ತಂತ್ರಜ್ಞಾನವನ್ನು ನೀಡಿದೆ. ಆದರೆ ಬೈಡುವಿನ ವೈಸ್ ಟು ಟೆಕ್ಸ್ಟ್ ಆ್ಯಪ್ ಹೆಚ್ಚು ವೇಗವಾಗಿ ಕೆಲಸ ಮಾಡುತ್ತದೆ.

## ಇವೆಂಟ್‌ಬ್ರೈಟ್

ಆ್ಯಂಡ್ರಾಯ್ಡ್‌ನ ಈ ಆ್ಯಪ್‌ನಿಂದ ನಿಮ್ಮ ನಗರದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ನೋಂದಣಿ ಮಾಡಿಸಬಹುದು ಹಾಗೂ ಅಲ್ಲಿ ನೋಂದಣಿಯಾದ ಕಾರ್ಯಕ್ರಮಗಳಿಗೆ ಟಿಕೆಟ್ ಖರೀದಿಸಬಹುದು. ಈ ಪ್ರಕ್ರಿಯೆ ಅತ್ಯಂತ ಸರಳವಾಗಿದ್ದು, ಟಿಕೆಟ್ ಪ್ರಿಂಟ್ ಮಾಡುವ ಕಷ್ಟವನ್ನು ತಪ್ಪಿಸಬಹುದು. ಇದರ ಮೂಲಕವೇ ಕ್ಲಬ್, ಸಂಘಟನೆಗಳ ಸಭೆಯ ಜಾಗವನ್ನೂ ನಿಗದಿಪಡಿಸಬಹುದು. ಇದರಲ್ಲಿ ಯೂ, ಪಾಪ್ಯುಲರ್ ಮತ್ತು ಫ್ರೆಂಡ್ಸ್ ಎಂಬ ಮೂರು ವಿಭಾಗಗಳಿವೆ. ನಿಮ್ಮ ಆಸಕ್ತಿಯನ್ನು ತಿಳಿದುಕೊಂಡು ಯೂ ವಿಭಾಗದಲ್ಲಿ ಶಿಫಾರಸ್ಸುಗಳು ಬಂದು ಬೀಳುತ್ತವೆ. ಪಾಪ್ಯುಲರ್‌ನಲ್ಲಿ ನೋಂದಣಿ ಮಾಡಿಕೊಂಡ ಕಾರ್ಯಕ್ರಮಗಳ ಪಟ್ಟಿ ಸಿಗುತ್ತದೆ. ಫ್ರೆಂಡ್ಸ್‌ನಲ್ಲಿ ನಿಮ್ಮ ಫೇಸ್‌ಬುಕ್ ಸ್ನೇಹಿತರು ಭೇಟಿ ನೀಡಬಹುದಾದ ಕಾರ್ಯಕ್ರಮಗಳ ವಿವರ ಸಿಗುತ್ತದೆ. ಆ್ಯಪ್ ನಿಮ್ಮ ಸ್ಮಾರ್ಟ್‌ಫೋನಿನ ಜಿಪಿಎಸ್ ಬಳಸಿ ಆ ಪ್ರದೇಶದಲ್ಲಿ ನಡೆಯಬಹುದಾದ ಕಾರ್ಯಕ್ರಮಗಳ ವಿವರ ನೀಡುತ್ತದೆ. ಗೆಟ್ ಟಿಕೆಟ್ಸ್ ವಿಭಾಗವಿದ್ದು, ಅಲ್ಲಿ ಟಿಕೆಟ್ ಖರೀದಿಸಬಹುದು.







## ವಾಟ್ಸ್ಆ್ಯಪ್ ಮಾಹಿತಿ

ನಿಮ್ಮ ಫೋನ್ ಕಳೆದುಹೋದರೆ ಅಥವಾ ಕ್ರ್ಯಾಷ್ ಆದರೆ ವಾಟ್ಸ್ಆ್ಯಪ್ ಸಂಭಾಷಣೆಗಳು, ಅಂಕಿ– ಅಂಶಗಳೆಲ್ಲ ಅಳಿಸಿ ಹೋಗುತ್ತವೆ. ಐಕ್ಲೌಡ್ ಅಥವಾ ಗೂಗ್ಲ್ ಡ್ರೈವ್ ಇದ್ದರೆ ಅಲ್ಲಿ ಸಂಗ್ರಹವಾದ ಸಂಪರ್ಕ ಸಂಖ್ಯೆಗಳು, ಫೋಟೋಗಳು, ವಿಡಿಯೋಗಳನ್ನು ಮತ್ತೆ ಪಡೆಯಬಹುದು. ಆದರೆ ಮೆಸೆಂಜರ್‌ನಲ್ಲಿರುವ ಸಂಭಾಷಣೆಗಳ ಗತಿಯೇನು? ಇದಕ್ಕೂ ಉಪಾಯಗಳಿವೆ. ಐಒಎಸ್ ಮತ್ತು ಆ್ಯಂಡ್ರಾಯ್ಡ್ ಫೋನ್‌ನಲ್ಲಿ ವಾಟ್ಸ್ಆ್ಯಪ್ ಅನ್ನು ಕ್ರಮವಾಗಿ ಐಕ್ಲೌಡ್‌ಗೆ, ಗೂಗ್ಲ್ ಡ್ರೈವ್‌ಗೆ ಸಂಪರ್ಕಿಸಬೇಕು. ಇದಕ್ಕಾಗಿ ಸೆಟಿಂಗ್ಸ್‌ನಲ್ಲಿ ಚ್ಯಾಟ್‌ಗೆ ಹೋಗಿ ನಂತರ ಚ್ಯಾಟ್ ಬ್ಯಾಕಪ್‌ಗೆ ಹೋಗಿ. ಸಂಪರ್ಕ ಪಡೆದ ನಂತರ ವಾಟ್ಸ್ಆ್ಯಪ್ ಖಾತೆಯಲ್ಲಿರುವ ಚ್ಯಾಟ್, ಫೋಟೊ ಮೊದಲಾದವುಗಳನ್ನು ಗೂಗ್ಲ್ ಡ್ರೈವ್ ಅಥವಾ ಐಕ್ಲೌಡ್‌ಗೆ ಸಿಂಕ್ ಮಾಡಬೇಕು. ಎಲ್ಲವೂ ಬ್ಯಾಕಪ್‌ನಲ್ಲಿದ್ದು ಒಂದು ವೇಳೆ ಫೋನ್ ಕಳೆದು ಹೋದರೂ ಸೆಟಿಂಗ್ ಮಾಡುವಾಗ ಜಿಮೇಲ್ ಖಾತೆ ಸಂಪರ್ಕಿಸಿ ಗೂಗ್ಲ್ ಡ್ರೈವ್/ ಐಕ್ಲೌಡ್‌ನಲ್ಲಿರುವ ಎಲ್ಲಾ ಮಾಹಿತಿಯನ್ನೂ ಪುನಃ ಹುಡುಕಿ ಕೊಡುತ್ತದೆ.



## ಹೊಸ ರೈಲ್ವೆ ಆ್ಯಪ್

ರೈಲ್ವೆ ನಿಲ್ದಾಣದಲ್ಲಿ ಕೂಲಿಗಳಿಂದ, ಟ್ಯಾಕ್ಸಿ ಚಾಲಕರಿಂದ ಆಗುವ ಕಿರಿಕಿರಿ ಕಡಿಮೆ ಮಾಡಲು ಭಾರತೀಯ ರೈಲ್ವೆ ಇಲಾಖೆಯು ಹೊಸ ಆ್ಯಪ್ ಬಿಡುಗಡೆ ಮಾಡಲಿದೆ. ಇದರ ಮೂಲಕ ಟ್ಯಾಕ್ಸಿ, ಹೋಟೆಲ್ ಕೊಠಡಿ ಮುಂಗಡವಾಗಿ ಕಾದಿರಿಸಬಹುದು. ಜೊತೆಗೆ ರೈಲ್ವೆಯಲ್ಲೂ ಊಟ– ತಿಂಡಿಯನ್ನು ಮೊದಲೇ ಕಾದಿರಿಸಬಹುದು. ಇದಕ್ಕಾಗಿ ಸಮಗ್ರ ರೈಲ್ವೆ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ನಿಮ್ಮ ಮನೆಯಿಂದ ನಿಲ್ದಾಣಕ್ಕೆ ತೆರಳಲು, ನಿಲ್ದಾಣದಿಂದ ಹೋಗಬೇಕಾದ ಸ್ಥಳವನ್ನು ತಲುಪಲು ಓಲಾ ಅಥವಾ ಉಬೇರ್ ಟ್ಯಾಕ್ಸಿಯನ್ನು ಇದರಿಂದಲೇ ಕಾದಿರಿಸಬಹುದು. ರೈಲ್ವೆ ಹಾದು ಹೋಗುವ ಸ್ಥಳಗಳಲ್ಲಿನ ನಿಮ್ಮ ನೆಚ್ಚಿನ ಉಪಾಹಾರಗೃಹದಿಂದ ಊಟ– ತಿಂಡಿ ಪಾರ್ಸಲ್‌ಗೆ ಬೇಡಿಕೆ ಸಲ್ಲಿಸಬಹುದು. ಓಯೊ ಕೊಠಡಿ ಕೂಡಾ ಕಾದಿರಿಸಬಹುದು. ಈ 'ಇಂಟೆಗ್ರೇಟೆಡ್ ಮೊಬೈಲ್ ಆ್ಯಪ್ ಎಕೊಸಿಸ್ಟಮ್' ಮುಂದಿನ ಮಾರ್ಚ್ 31ರಂದು ಬಿಡುಗಡೆಯಾಗಲಿದೆ

■ ಎಸ್.ತುಂಬೆ